2016 ಕ.ತೀ.ವ 1410

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಶೋಕ್ ಬಿ. ಹಿಂಚಿಗೇರಿ

## ಶ್ರೀಮತಿ ಚಿನ್ನಮ್ಮ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಹಾಗೂ ಮತ್ತೊಬ್ಬರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಕೈಯಿಂದ ಕೆಲಸ ಮಾಡುವ ಜಾಡಮಾಲಿಗಳ ಉದ್ಯೋಗವನ್ನು ನಿಷೇಧಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಅಧಿನಿಯಮ, 2013ರ – 13ನೇ ಪ್ರಕರಣ.

ಇಲ್ಲಿನ ಅರ್ಜಿದಾರರು ಅನುಕ್ರಮವಾಗಿ ಚೆಂಚಯ್ಯ ಎಂಬುವರ ಪತ್ನಿ, ಮಗಳು ಮತ್ತು ಮಗನಾಗಿದ್ದು, ಚೆಂಚಯ್ಯನು ಚರಂಡಿಯನ್ನು ಸ್ವಚ್ಛ ಮಾಡುತ್ತಿದ್ದಾಗ, ದಿನಾಂಕ 18.01.2014ರಂದು ನೀರಿನಲ್ಲಿ ಮುಳುಗಿ ಮೃತರಾಗಿದ್ದಾರೆ. ಮರಣೋತ್ತರ ಪರೀಕ್ಷೆ ವರದಿಯೂ ಕೂಡ (ಅನುಬಂಧ–ಜಿ) ಅವರು ನೀರಿನಲ್ಲಿ ಮುಳುಗಿದ ಪರಿಣಾಮ ಉಸಿರುಗಟ್ಟಿದ ಕಾರಣದಿಂದ ಮೃತರಾಗಿದ್ದಾರೆಂಬುದನ್ನು ತೋರಿಸುತ್ತದೆ. ಎರಡನೇ ಎದುರುದಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿ.ಬಿ.ಎಂ.ಪಿ.) ಈಗಾಗಲೇ 2,00,000/– ರೂ.ಗಳ ನಷ್ಟ ಪರಿಹಾರವನ್ನು ನೀಡಿದೆ. ಮೃತ ಚೆಂಚಯ್ಯನ ಅವಲಂಬಿತರು ಪುನರ್ವಸತಿ ಮುಂತಾದವುಗಳ ಹಕ್ಕುಗಳಿಗಾಗಿ ವಾದಿಸಿದ್ದಾರೆ.

"ಸದಾಕಾಲ ನಿರಂತರವಾಗಿರುವಂಥ ಸ್ವಚ್ಛವಾಗಿಲ್ಲದ ಶೌಚಗೃಹಗಳಿಂದ ಹೊರಬರುವ ಹೊಲಸನ್ನು ದೈಹಿಕವಾಗಿ ಸ್ವಚ್ಛಗೊಳಿಸುವ ಅಮಾನವೀಯ ಪದ್ಧತಿ ಮತ್ತು ಘನ ಘೋರವಾದ ಜಾತಿಪದ್ಧತಿಯು ದೇಶದ ನಾನಾ ಭಾಗಗಳಲ್ಲಿ ಇನ್ನೂ ಜೀವಂತವಾಗಿದ್ದು, ನೈರ್ಮಲ್ಯ ರಹಿತ ಶೌಚಗೃಹಗಳು ಮತ್ತು ದೈಹಿಕವಾಗಿ ಸ್ವಚ್ಛಗೊಳಿಸುವ ಈ ಅವಳಿ

*ರಿಟ್ ಅರ್ಜಿ ಸಂಖ್ಯೆ: 16365/2014 (ಜಿಎಂ–ಆರ್‌ಇಎಸ್), ದಿನಾಂಕ: 11ನೇ ಜನವರಿ, 2016.

ದುಷ್ಟ ಪದ್ಧತಿಗಳನ್ನು ನಿವಾರಿಸುವುದನ್ನು ಈಗಿರುವ ಕಾನೂನು ಸರಿಯಾಗಿ ರುಜುವಾತುಪಡಿಸಿರುವುದಿಲ್ಲ;

ಹಿಂದಿನಿಂದ ಬಂದಿರುವ ಅನ್ಯಾಯವನ್ನು ಸರಿಪಡಿಸುವುದು ಮತ್ತು ದೈಹಿಕವಾಗಿ ಸ್ವಚ್ಛಗೊಳಿಸುವ ಜಾಡಮಾಲಿಗಳು ಅನುಭವಿಸುತ್ತಿರುವ ಅಪಮಾನವನ್ನು ಸರಿಪಡಿಸುವುದು ಅಗತ್ಯವಾಗಿದೆ.

ಮೃತರಿಗೆ 75 ವರ್ಷ ವಯಸ್ಸಾಗಿತ್ತು ಮತ್ತು ಅವರ ಕರ್ತವ್ಯಗಳನ್ನು ನಿರ್ವಹಿಸುವ ಕ್ರಮದಲ್ಲಿ ಉದಾಸೀನತೆಯನ್ನು ಅವನು ತೋರಿರುವನೆನ್ನುವ ಆಧಾರದ ಮೇಲೆ, ಈ ಅರ್ಜಿಯನ್ನು ಆಚೆಗೆ ಎಸೆಯಲು ಸಾಧ್ಯವಾಗುವುದಿಲ್ಲ. ದೆಹಲಿ ಜಲ ಮಂಡಳಿ –ವಿರುದ್ಧ– ಒಳಚರಂಡಿ ಮತ್ತು ಸಂಬಂಧಿತ ಕೆಲಸಗಾರರ ಗೌರವ ಮತ್ತು ಹಕ್ಕುಗಳ ಸಂಬಂಧದಲ್ಲಿ ರಾಷ್ಟ್ರೀಯ ಪ್ರಚಾರ ಆಂದೋಲನ ಮತ್ತು ಇತರರು (ಮೇಲಿನ) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ, ಸ್ವಚ್ಛಗೊಳಿಸುವ ಉದ್ದೇಶಕ್ಕಾಗಿ ಒಳಚರಂಡಿ ಪದ್ಧತಿಯ ಮ್ಯಾನ್‌ಹೋಲ್ ಅನ್ನು ಪ್ರವೇಶಿಸಲು ಯಾರೊಬ್ಬರೂ ಇಷ್ಟಪಡುವುದಿಲ್ಲ; ಕೆಲವು ವ್ಯಕ್ತಿಗಳನ್ನು ಇಂಥ ಅಪಾಯದ ಕೆಲಸಗಳನ್ನು ಕೈಗೊಳ್ಳಲು ನೂಕಲ್ಪಟ್ಟಾಗ ದಿನದ ಕೊನೆಯಲ್ಲಿ, ತಮ್ಮ ಕುಟುಂಬಕ್ಕೆ ಸ್ವಲ್ಪ ಹಣವನ್ನು ಮತ್ತು ಆಹಾರವನ್ನು ಹುಟ್ಟಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ಭರವಸೆ ಮಾತ್ರ ಇರುತ್ತದೆ; ದೈಹಿಕವಾಗಿ ಸ್ವಚ್ಛಗೊಳಿಸುವವರಿಗೆ ಇತರರ ಅನುಕೂಲಕ್ಕಾಗಿ ತಮ್ಮ ಜೀವಗಳನ್ನು ಕಳೆದುಕೊಳ್ಳುವ ಅಪಾಯವಿರುತ್ತದೆ. ಯಾರೋ ಒಬ್ಬರು ಮ್ಯಾನ್‌ಹೋಲ್‌ನಲ್ಲಿ ಮೃತರಾದಾಗ ನ್ಯಾಯಾಲಯಗಳು ಜವಾಬ್ದಾರಿಯನ್ನು ಹೊಂದಿರುತ್ತವಷ್ಟೇ ಅಲ್ಲ ಜೀವಕ್ಕೆ ಅಪಾಯ ಮತ್ತು ಗಂಡಾಂತರವನ್ನುಂಟು ಮಾಡುವಂಥ ಕೆಲಸಗಳಿಗೆ ನೂಕಲ್ಪಡುವ ವ್ಯಕ್ತಿಗಳ ಜೀವಗಳಿಗೆ ಸಂಬಂಧಪಟ್ಟಂಥ ವಿವಾದಾಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುವ ಸಾಂವಿಧಾನಿಕ ಹೊಣೆಗಾರಿಕೆಯನ್ನು ಹೊಂದಿರುತ್ತವೆ.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಎರಡನೇ ಎದುರುದಾರರಿಗೆ, 10.00 ಲಕ್ಷ ರೂ.ಗಳ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕೆಂದು ಈಗಾಗಲೇ ಸೂಚಿಸಿರುವುದನ್ನು ಗಮನಿಸಿರುವುದು ಸಹ ಸೂಕ್ತವಾಗಿದೆ. ಮೊದಲನೇ ಎದುರುದಾರನು

ತನ್ನ ಸಮಾಜ ಕಲ್ಯಾಣ ಇಲಾಖೆ ಮೂಲಕ 10.00 ಲಕ್ಷ ರೂ.ಗಳ ನಷ್ಟ ಪರಿಹಾರವನ್ನು ಮತ್ತು ದಿನಾಂಕ 16.09.2014ರ ತನ್ನ ಪತ್ರದಿಂದ ಸಾಕ್ಷ್ಯವಾಗಿರುವಂತೆ ಮೃತ ಚೆಂಚಯ್ಯನ ಅವಲಂಬಿತರಿಗೆ ನೀಡಬೇಕಾದ ಇತರ ಪ್ರಯೋಜನಗಳನ್ನು ಈಗಾಗಲೇ ಶಿಫಾರಸು ಮಾಡಿದ್ದಾರೆ.

ಎರಡನೇ ಸಂಖ್ಯೆಯ ಎದುರುದಾರನು, ಇಂದಿನ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಹೊರಡಿಸಿದ ದಿನಾಂಕದಿಂದ ಆರು ವಾರಗಳೊಳಗೆ ಮೃತ ಚೆಂಚಯ್ಯನ ಅವಲಂಬಿತರಿಗೆ 8,00,000/– ರೂ.(ಎಂಟು ಲಕ್ಷ ರೂ.ಗಳು ಮಾತ್ರ) ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

ಎರಡನೇ ಸಂಖ್ಯೆಯ ಎದುರುದಾರನು, ಸದರಿ ಅಧಿನಿಯಮದ 13ನೇ ಪ್ರಕರಣವು ಖಾತರಿಪಡಿಸಿರುವ ಮತ್ತು ಸಫಾಯಿ ಕರ್ಮಚಾರಿ ಆಂದೋಲನ ಮತ್ತು ಇತರರು –ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು (ಮೇಲಿನ) ಪ್ರಕರಣದಲ್ಲಿ ತನ್ನ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಬೇಕೆಂದು ಸೂಚಿಸಿರುವ ಎಲ್ಲಾ ಪ್ರಯೋಜನಗಳನ್ನು ಇಂದಿನ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಹೊರಡಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗೆ ಸದರಿ ಚೆಂಚಯ್ಯನ ಅವಲಂಬಿತರಿಗೆ ನೀಡತಕ್ಕದ್ದು ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 2011(7) ಸ್ಕೇಲ್ 489*
*ದೆಹಲಿ ಜಲ ಮಂಡಳಿ –ವಿರುದ್ಧ– ಒಳಚರಂಡಿ ಮತ್ತು ಸಂಬಂಧಿತ ಕೆಲಸಗಾರರ ಗೌರವ ಮತ್ತು ಹಕ್ಕುಗಳ ಸಂಬಂಧದಲ್ಲಿ ರಾಷ್ಟ್ರೀಯ ಪ್ರಚಾರ ಆಂದೋಲನ ಮತ್ತು ಇತರರು (ಉಲ್ಲೇ) 3*

*2. (2014) 11 ಎಸ್‌ಸಿಸಿ 224*
*ಸಫಾಯಿ ಕರ್ಮಚಾರಿ ಆಂದೋಲನ ಮತ್ತು ಇತರರು –ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು (ಉಲ್ಲೇ) 4*

ಅರ್ಜಿದಾರರ ಪರ: ಶ್ರೀ ಕ್ಲಿಫ್ಟನ್ ಡಿ. ರೋಜಾರಿಯೋ ವಕೀಲರು ಇವರ ಪರವಾಗಿ ಕುಮಾರಿ ಮೈತ್ರೇಯಿ ಕೃಷ್ಣನ್, ವಕೀಲರು.

1ನೇ ಪ್ರತ್ಯರ್ಜಿದಾರರ ಪರ: ಶ್ರೀ ಆರ್.ಬಿ. ಸತ್ಯನಾರಾಯಣ ಸಿಂಗ್, ಅಪರ ಸರ್ಕಾರಿ ವಕೀಲರು,

2ನೇ ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಎನ್. ಪುಟ್ಟೇಗೌಡ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಅಶೋಕ್ ಬಿ. ಹಿಂಚಿಗೇರಿ:**

1 ರಿಂದ 3ರ ವರೆಗಿನ ಸಂಖ್ಯೆಯ ಅರ್ಜಿದಾರರು, ಅನುಕ್ರಮವಾಗಿ ಚೆಂಚಯ್ಯ ಎಂಬುವರ ಪತ್ನಿ, ಮಗಳು ಮತ್ತು ಮಗನಾಗಿದ್ದು, ಚೆಂಚಯ್ಯನು ಚರಂಡಿಯನ್ನು ಸ್ವಚ್ಛ ಮಾಡುತ್ತಿದ್ದಾಗ, ದಿನಾಂಕ 18.01.2014ರಂದು ನೀರಿನಲ್ಲಿ ಮುಳುಗಿ ಮೃತರಾಗಿದ್ದಾರೆ. ಮರಣೋತ್ತರ ಪರೀಕ್ಷೆ ವರದಿಯೂ ಕೂಡ (ಅನುಬಂಧ–ಜಿ) ಅವರು ನೀರಿನಲ್ಲಿ ಮುಳುಗಿದ ಪರಿಣಾಮ ಉಸಿರುಗಟ್ಟಿದ ಕಾರಣದಿಂದ ಮೃತರಾಗಿದ್ದಾರೆಂಬುದನ್ನು ತೋರಿಸುತ್ತದೆ. ಎರಡನೇ ಎದುರುದಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿ.ಬಿ.ಎಂ.ಪಿ.) ಈಗಾಗಲೇ 2,00,000/– ರೂ.ಗಳ ನಷ್ಟ ಪರಿಹಾರವನ್ನು ನೀಡಿದೆ. ಮೃತ ಚೆಂಚಯ್ಯನ ಅವಲಂಬಿತರು ಪುನರ್ವಸತಿ ಮುಂತಾದವುಗಳ ಹಕ್ಕುಗಳಿಗಾಗಿ ವಾದಿಸಿದ್ದಾರೆ.

2. ಅರ್ಜಿದಾರರ ಪರವಾಗಿ ಶ್ರೀ ಕ್ಲಿಫ್ಟನ್ ಡಿ' ರೋಜಾರಿಯೊ ಇವರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಕುಮಾರಿ ಮೈತ್ರೇಯಿ ಕೃಷ್ಣನ್‌ರವರು, ಮೇಲ್ವಿಚಾರಕರಾದ ಶ್ರೀ ರಮೇಶ್‌ರವರು ಮೃತರನ್ನು ಮತ್ತು ಇತರ ಆರು ಸಫಾಯಿ ಕಾರ್ಮಿಕರನ್ನು ಆ ದುರ್ದಿನದಂದು ಪ್ರಶ್ನಿತ ಕೆಲಸದ ಮೇಲೆ ನಿಯೋಜಿಸಿದ್ದರೆಂಬುದನ್ನು ಆರೋಪ–ಪಟ್ಟಿಗೆ ಅನುಬಂಧಿಸಲಾಗಿರುವ ಮೂವರು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಗಳು, ಸ್ಪಷ್ಟವಾಗಿ ಸೂಚಿಸುತ್ತವೆಯೆಂದು ನಿವೇದಿಸಿದ್ದಾರೆ. ಕೈಯಿಂದ ಕೆಲಸ ಮಾಡುವ ಜಾಡಮಾಲಿಗಳ ಅವಲಂಬಿತರಿಗೆ ವಸತಿ ಸ್ಥಳ ಹಂಚಿಕೆ, ನಗದು ನೆರವು ಮುಂತಾದಂಥ

ಕೆಲವು ಪ್ರಯೋಜನಗಳಿಗೆ ಕಾನೂನು, ಹಕ್ಕನ್ನು ನೀಡುತ್ತದೆ ಎಂಬ ನಿವೇದನೆಯನ್ನು ಸಮರ್ಥಿಸಲು ಕೈಯಿಂದ ಕೆಲಸ ಮಾಡುವ ಜಾಡಮಾಲಿಗಳ ಉದ್ಯೋಗವನ್ನು ನಿಷೇಧಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಅಧಿನಿಯಮ, 2013ರಲ್ಲಿರುವಂತೆ ಸಂಬಂಧಪಟ್ಟ ಉಪಬಂಧಗಳನ್ನು ಮಾನ್ಯ ವಕೀಲರು ನನ್ನ ಗಮನಕ್ಕೆ ತಂದಿದ್ದಾರೆ. ***ದೆಹಲಿ ಜಲ ಮಂಡಳಿ –ವಿರುದ್ಧ– ಒಳಚರಂಡಿ ಮತ್ತು ಸಂಬಂಧಿತ ಕೆಲಸಗಾರರ ಗೌರವ ಮತ್ತು ಹಕ್ಕುಗಳ ಸಂಬಂಧದಲ್ಲಿ ರಾಷ್ಟ್ರೀಯ ಪ್ರಚಾರ ಆಂದೋಲನ ಮತ್ತು ಇತರರು*** [1], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಕಡೆಗೆ ತತ್ಪರತೆಯಿಂದ ಅವರು ನನ್ನ ಗಮನ ಸೆಳೆದಿದ್ದಾರೆ. ಅವರು ಓದಲಾದ ಸದರಿ ನಿರ್ಣಯದ ಕಂಡಿಕೆ ಸಂ.20 ಈ ಮುಂದಿನಂತಿದೆ:

> *"20. ಈ ತೀರ್ಪುಗಳು, ಎದುರುದಾರ ಸಂ.1 ಇವರು ಸಲ್ಲಿಸಿದ ರಿಟ್ ಅರ್ಜಿಯ ನಿರ್ವಹಣೆಗೆ ಅಪೀಲುದಾರನ ಆಕ್ಷೇಪಣೆಗೆ ಸಂಪೂರ್ಣ ಉತ್ತರ ನೀಡುತ್ತವೆ. ರಿಟ್ ಅರ್ಜಿಯನ್ನು ಪುರಸ್ಕರಿಸುವ ಮೂಲಕ ಮತ್ತು ಒಳಚರಂಡಿ ಕಾರ್ಯಾಚರಣೆಗಳಿಗೆ ಸಂಬಂಧಪಟ್ಟ ಕಾರ್ಯವನ್ನು ಮಾಡಲು ನಿಯೋಜಿಸಿದ ವ್ಯಕ್ತಿಗಳ ಸಂರಕ್ಷಣೆಗೆ ನಿರ್ದೇಶನಗಳನ್ನು ಹೊರಡಿಸುವ ಮೂಲಕ ಉಚ್ಚ ನ್ಯಾಯಾಲಯವು ಏನನ್ನು ಮಾಡಬಹುದು ಎಂದರೆ ಸಮಾಜದ ಅನಾನುಕೂಲಕರವಾದ ಮತ್ತು ಬಡವರ್ಗದವರಿಗೆ ನ್ಯಾಯವನ್ನು ಒದಗಿಸುವುದು ಇದರ ಹೊಣೆಗಾರಿಕೆಯ ಭಾಗವಾಗಿದೆ. ಪ್ರತಿಯೊಬ್ಬ ಮಾನವನಿಗೆ ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಲಾಗಿರುವ ಮೂಲಭೂತ ಹಕ್ಕುಗಳಿಂದ ವಂಚಿತರಾಗಿರುವವರ ಕಾರಣವನ್ನು ಎತ್ತಿಹಿಡಿಯಲು ನೈಜ ಸಾಮಾಜಿಕ ಸಮೂಹಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲು ನಿರಾಕರಿಸಿದರೆ, ವರಿಷ್ಠ ನ್ಯಾಯಾಲಯಗಳು ತಮ್ಮ ಸಾಂವಿಧಾನಿಕ ಕರ್ತವ್ಯವನ್ನು ನಿಭಾಯಿಸುವಲ್ಲಿ ಸೋಲುತ್ತವೆ ಎಂದು ನಾವು*

1. 2011(7) ಸ್ಕೇಲ್ 489

ಭಾವಿಸಬಹುದು. ಪ್ರತಿಯೊಬ್ಬ ನಾಗರಿಕ ಮತ್ತು ಪ್ರತಿಯೊಬ್ಬ ವ್ಯಕ್ತಿಯ ಹಕ್ಕುಗಳನ್ನು ಸಂರಕ್ಷಿಸಲು ಅದರ ರಾಜಕೀಯ ಮತ್ತು ಕಾರ್ಯಕಾರಿ ಘಟಕಗಳಂತೆಯೇ ರಾಜ್ಯದ ನ್ಯಾಯಿಕ ಘಟಕದ ಕರ್ತವ್ಯವಾಗಿರುತ್ತದೆ ಮತ್ತು ಪ್ರತಿಯೊಬ್ಬರೂ ಗೌರವಯುತವಾಗಿ ಬದುಕಲು ಸಮರ್ಥರಾಗಿರುತ್ತಾರೆಂಬುದನ್ನು ದೃಢಪಡಿಸುತ್ತದೆ. ಸ್ವಚ್ಛಗೊಳಿಸುವ ಉದ್ದೇಶಗಳಿಗಾಗಿ ಇರುವ ಒಳಚರಂಡಿ ಪದ್ಧತಿಯ ಮ್ಯಾನ್‌ಹೋಲ್ ಅನ್ನು ಪ್ರವೇಶಿಸಲು ಅವಕಾಶ ನೀಡಿದರೆ ಯಾರೊಬ್ಬರೂ ಅದನ್ನು ಇಷ್ಟಪಡುವುದಿಲ್ಲ. ಆದರೆ, ಅವರು ದಿನ ಮುಗಿಯುವುದರೊಳಗೆ ಸ್ವಲ್ಪವಾದರೂ ಹಣ ಗಳಿಸಲು ಸಾಧ್ಯವಾಗುತ್ತದೆ ಮತ್ತು ತಮ್ಮ ಕುಟುಂಬಕ್ಕೆ ಒಂದೊತ್ತಿನ ಊಟ ಉಣಿಸಬಹುದೆನ್ನುವ ಭರವಸೆ ಹೊತ್ತುಕೊಂಡು ಅಂಥ ಅಪಾಯಕರ ಕೆಲಸಗಳನ್ನು ಕೈಗೊಳ್ಳಲು ನೂಕಲ್ಪಡುವ ಜನರಿದ್ದಾರೆ. ಅವರು ಬೇರೆಯವರ ಅನುಕೂಲಕ್ಕಾಗಿ ತಮ್ಮ ಜೀವಗಳನ್ನು ಅಪಾಯಕೊಡ್ಡುತ್ತಾರೆ. ದುರಾದೃಷ್ಟವಶಾತ್, ಕಳೆದ ಕೆಲವು ದಶಕಗಳಿಂದ, ನಗರ ಸಮಾಜದ ಗಣನೀಯ ಪ್ರಮಾಣದ ವರ್ಗದವರು, ಸ್ವಾಭಾವಿಕವಾಗಿ ಬರೀ ಆರ್ಥಿಕ ಒತ್ತಾಯಗಳ ಕಾರಣದಿಂದ ಜೀವಕ್ಕೆ ಅಪಾಯವಿರುವಂತಹ ಕೆಲಸ / ಕಾರ್ಯಗಳನ್ನು ಕೈಗೊಳ್ಳುವವರನ್ನು ಒಳಗೊಂಡಂತೆ ಬಡ ಮತ್ತು ದಲಿತ ವರ್ಗದವರ ಶೋಚನೀಯ ಸ್ಥಿತಿಯ ಬಗ್ಗೆ ಉದಾಸೀನ ಮನೋಭಾವ ಹೊಂದಿರುತ್ತಾರೆ. ಈ ವರ್ಗಕ್ಕೆ ಸೇರಿದ ಜನರು, ಒಬ್ಬ ವ್ಯಕ್ತಿ ಸುರಕ್ಷತಾ ಪರಿಕರ ಮತ್ತು ಯುಕ್ತ ಸಲಕರಣೆಗಳಿಲ್ಲದೆ ಯಾಕೆ ಮ್ಯಾನ್‌ಹೋಲ್‌ಗಳಲ್ಲಿ ಇಳಿಯುತ್ತಾರೆಂಬುದನ್ನು ಅರ್ಥಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಮ್ಯಾನ್‌ಹೋಲ್‌ನಲ್ಲಿ ಮೃತನಾದ ಕೆಲಸಗಾರನ ದೇಹವನ್ನು, ರೋಪ್‌ವೇಗಳು ಮತ್ತು ಕ್ರೇನುಗಳ ಸಹಾಯದಿಂದ ಹೊರತೆಗೆದಾಗ ಅವರು ಬೇರೆ ರೀತಿಯಲ್ಲೇ ನೋಡುತ್ತಾರೆ. ಈ ಘಟನೆಯಲ್ಲಿ ನ್ಯಾಯಾಲಯಗಳು ಜವಾಬ್ದಾರವಾಗಿರುತ್ತವಷ್ಟೆ ಅಲ್ಲ, ಅಪಾಯ ಮತ್ತು ಕೆಡಕಾಗುವಂಥ ಕೆಲಸಗಳನ್ನು ಮಾಡಲು ನೂಕಲ್ಪಡುವ ಜನರ ಜೀವಗಳಿಗೆ ಸಂಬಂಧಪಟ್ಟ ವಿವಾದಾಂಶಗಳನ್ನು

*ಗಮನಕ್ಕೆ ತೆಗೆದುಕೊಳ್ಳುವ ಸಾಂವಿಧಾನಿಕ ಹೊಣೆಗಾರಿಕೆಯನ್ನೂ ಹೊಂದಿರುತ್ತವೆ. ಬಡಜನರ, ದಮನಿತರ ಮತ್ತು ಸಮಾಜದ ಅನುಕೂಲವಂಚಿತರ ಕಾನೂನು ಮತ್ತು ಸಾಂವಿಧಾನಿಕ ಹಕ್ಕುಗಳ ಸಂರಕ್ಷಣೆ ಮತ್ತು ಜಾರಿಗೊಳಿಸುವುದನ್ನು ಕೋರಿ ಮುಂದೆ ಬಂದ, ಯಾವುದೇ ವೈಯುಕ್ತಿಕ ಲಾಭ ಇತರ ಬಾಹ್ಯಕಾರಣಗಳಿಂದ ಪ್ರೇರೇಪಿತವಾಗಿಲ್ಲದಿರುವವರಿಗೆ ವರಿಷ್ಠ ನ್ಯಾಯಾಲಯಗಳು ಬಾಗಿಲು ಮುಚ್ಚಿದರೆ ಅಂದು ದುರಂತದ ಮತ್ತು ದುಃಖಕರ ದಿನವಾಗುತ್ತದೆ. ತೆರಿಗೆಗಳನ್ನು ಸಂದಾಯ ಮಾಡುವುದರಿಂದ ಮತ್ತು ಕರ್ತವ್ಯಗಳಿಂದ ತಪ್ಪಿಸಿಕೊಳ್ಳುವ ಅಥವಾ ಇತರೆ ರೀತಿಯಲ್ಲಿ ಸರ್ಕಾರಿ ಬೊಕ್ಕಸಕ್ಕೆ ನಷ್ಟವುಂಟು ಮಾಡುವ ಅಥವಾ ಕೊಲೆ, ಅತ್ಯಾಚಾರ, ವರದಕ್ಷಿಣೆ ಸಾವು, ಅಪಹರಣ, ಹೊತ್ತೊಯ್ಯುವಿಕೆಯಂಥ ಅಥವಾ ಭಯೋತ್ಪಾದಕ ಕೃತ್ಯಗಳನ್ನೂ ಸಹ ಮಾಡುವಂಥ ಅಪರಾಧಿಗಳ ಅಥವಾ ಕರಾರು ಜನ್ಯ ವಿಷಯಗಳಲ್ಲಿ ರಾಜ್ಯ ಮತ್ತು / ಅಥವಾ ಅದರ ಏಜೆನ್ಸಿಗಳು/ಮಾಧ್ಯಮಗಳು ತಮ್ಮ ಮೂಲಭೂತ ಸಮಾನತೆಯ ಹಕ್ಕುಗಳನ್ನು ಉಲ್ಲಂಘಿಸಿವೆಯೆನ್ನುವ ತೊಂದರೆಯಿಂದಾಗಿ ಮುಂದೆ ಬಂದಿರುವಂಥ ವ್ಯಕ್ತಿಗಳ ಕಾರ್ಯದಲ್ಲಿ ನಿರತರಾಗಿರುವ ದಕ್ಷ ವಕೀಲರು ಈ ವರ್ಗದವರ ವಾದವನ್ನು ಆಲಿಸಲು ಗಂಟೆಗಳು, ದಿನಗಳು ಮತ್ತು ತಿಂಗಳುಗಳನ್ನು ಮೀಸಲಾಗಿಡಬಹುದಾದರೆ, ಸ್ವಲ್ಪ ಸಮಯವನ್ನು, ಎದುರುದಾರ ಸಂ.1ರಂಥ ನಿಕಾಯಗಳು ಸಮರ್ಥಿಸಿದ ಬಹು ಹೆಚ್ಚಿನ ಸಂಖ್ಯೆಯಲ್ಲಿ ಮೂಕವೇದನೆ ಅನುಭವಿಸುವವರ ತೊಂದರೆಯನ್ನು ಆಲಿಸಲು ಯಾವಾಗಲೂ ಮೀಸಲಿರಿಸಬಹುದು.*

4. ನಂತರ, ***ಸಫಾಯಿ ಕರ್ಮಚಾರಿ ಆಂದೋಲನ ಮತ್ತು ಇತರರು –ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು***[2] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಮಾನ್ಯ ವಕೀಲರು ಅವಲಂಬಿಸಿದ್ದಾರೆ. ಸಕಾರಾತ್ಮಕ ನಿರ್ದೇಶನಗಳು

2. (2014) 11 ಎಸ್‌ಸಿಸಿ 224

ಮತ್ತು ದೃಢೀಕೃತ ಕಾರ್ಯಗಳನ್ನು ಒಳಗೊಂಡಿರುವ ಸದರಿ ನಿರ್ಣಯದ 23.1, 23.3 ಮತ್ತು 23.4ನೇ ಸಂಖ್ಯೆಗಳ ಕಂಡಿಕೆಯುನ್ನು ಇಲ್ಲಿ ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

*"23.1. ಅಧಿನಿಯಮ, 2013ರ 11 ಮತ್ತು 12ನೇ ಪ್ರಕರಣಗಳ ಮೇರೆಗೆ ಕೈಯಿಂದ ಸ್ವಚ್ಛಗೊಳಿಸುವ ಜಾಡಮಾಲಿಯವರ ಅಂತಿಮ ಪಟ್ಟಿಯಲ್ಲಿ ಸೇರಿಸಲಾದ ವ್ಯಕ್ತಿಗಳಿಗೆ ಅಧಿನಿಯಮ, 2013ರ IVನೇ ಅಧ್ಯಾಯದ ಉಪಬಂಧಗಳ ಪ್ರಕಾರ ಈ ಮುಂದಿನ ರೀತಿಯಲ್ಲಿ ಪುನರ್ವಸತಿ ವ್ಯವಸ್ಥೆ ಕಲ್ಪಿಸುವುದು, ಎಂದರೆ:*

*(ಎ) ನಿಯಮಿಸಬಹುದಾದಂಥ ಉಪಕ್ರಮ, ಒಂದು ಬಾರಿ ನಗದು ನೆರವು;*

*(ಬಿ) ಅವರ ಮಕ್ಕಳು, ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳ ಸಂಬಂಧಪಟ್ಟ ಯೋಜನೆ ಪ್ರಕಾರ ವಿದ್ಯಾರ್ಥಿ ವೇತನಕ್ಕೆ ಹಕ್ಕುಳ್ಳವರಾಗಿರತಕ್ಕದ್ದು;*

*(ಸಿ) ಸಂಬಂಧಪಟ್ಟ ಯೋಜನೆಯ ಉಪಬಂಧಗಳ ಪ್ರಕಾರ ಕೈಯಿಂದ ಸ್ವಚ್ಛಗೊಳಿಸುವವರ ಅರ್ಹತೆ ಮತ್ತು ಇಚ್ಛೆಗೊಳಪಟ್ಟು ಅವರಿಗೆ ಗೃಹ ನಿರ್ಮಾಣಕ್ಕಾಗಿ, ನಿವೇಶನವನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಆರ್ಥಿಕ ನೆರವನ್ನು ನೀಡತಕ್ಕದ್ದು, ಅಥವಾ ಸಿದ್ಧ – ನಿರ್ಮಿತ ಮನೆಯನ್ನು ಹಂಚಿಕೆ ಮಾಡತಕ್ಕದ್ದು;*

*(ಡಿ) ಕನಿಷ್ಠ ಪಕ್ಷ ಅವರ ಕುಟುಂಬದಲ್ಲಿ ಒಬ್ಬರಿಗೆ, ಅರ್ಹತೆ ಮತ್ತು ಇಚ್ಛೆಗೊಳಪಟ್ಟು,ಜೀವನೋಪಾಯ ಕೌಶಲ್ಯಕ್ಕೆ*

*ತರಬೇತಿಯನ್ನು ನೀಡತಕ್ಕದ್ದು ಮತ್ತು ಅಂಥ ಅವಧಿಯಲ್ಲಿ ಮಾಸಿಕ ತರಬೇತಿ ಭತ್ಯೆಯನ್ನು ನೀಡತಕ್ಕದ್ದು;*

*(ಇ) ಅರ್ಹತೆ ಮತ್ತು ಇಚ್ಛೆಗೊಳಪಟ್ಟು ಕನಿಷ್ಠಪಕ್ಷ ಅವರ ಕುಟುಂಬದಲ್ಲಿನ ಒಬ್ಬ ವಯಸ್ಕ ಸದಸ್ಯರಿಗೆ, ಸಂಬಂಧಪಟ್ಟ ಯೋಜನೆಯ ಉಪಬಂಧಗಳ ಪ್ರಕಾರ ಸಮರ್ಥನೀಯ ಆಧಾರದ ಮೇಲೆ ಪರ್ಯಾಯ ಉದ್ಯೋಗವನ್ನು ಕೈಗೊಳ್ಳಲು ಸಹಾಯಾನುದಾನ ಮತ್ತು ವಿನಾಯಿತಿ ಸಾಲವನ್ನು ನೀಡತಕ್ಕದ್ದು;*

*(ಎಫ್) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಈ ಬಗ್ಗೆ ಅಧಿಸೂಚಿಸಬಹುದಾದಂಥ ಇತರ ಕಾನೂನು ಮತ್ತು ಕಾರ್ಯಕ್ರಮಾತ್ಮಕ ನೆರವನ್ನು ನೀಡತಕ್ಕದ್ದು.*

*23.3. 1993 ರಿಂದ ಒಳಚರಂಡಿ ಕಾಮಗಾರಿ (ಮ್ಯಾನ್‌ಹೋಲ್‌ಗಳು ಸೆಪ್ಟಿಕ್ ಟ್ಯಾಂಕ್‌ಗಳು)" ಗಳಲ್ಲಿ ಮೃತರಾಗಿರುವ ಎಲ್ಲಾ ವ್ಯಕ್ತಿಗಳ ಕುಟುಂಬಗಳನ್ನು ಗುರುತಿಸುವುದು ಮತ್ತು ಅವರನ್ನು ಅವಲಂಬಿಸಿರುವ ಕುಟುಂಬದ ಸದಸ್ಯರಿಗೆ ಅಂಥ ಪ್ರತೀ ಮರಣಕ್ಕೆ 10 ಲಕ್ಷ ರೂ.ಗಳ ನಷ್ಟ ಪರಿಹಾರವನ್ನು ನೀಡುವುದು.*

*23.4. ಮೇಲೆ ಉಲ್ಲೇಖಿಸಲಾದ ಅಧಿನಿಯಮದ ವಿವಿಧ ಉಪಬಂಧಗಳು ಮತ್ತು ನ್ಯಾಯಾಲಯವು ಹೊರಡಿಸಿದ ವಿವಿಧ ಸೂಚನೆಗಳು ಹಾಗೂ ನಿಯಮಗಳ ಬೆಳಕಿನಲ್ಲಿ, ನಾವು, ಇದನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕೆಂದು ಮತ್ತು ಅನುಷ್ಠಾನಗೊಳಿಸಿರದ ಸಂಬಂಧ ಯುಕ್ತ ಕ್ರಮ ಕೈಗೊಳ್ಳಬೇಕೆಂದು ಹಾಗೂ ಅಧಿನಿಯಮ, 2013ರಲ್ಲಿ ಒಳಗೊಂಡ ಉಪಬಂಧಗಳ ಉಲ್ಲಂಘನೆಯ ಬಗ್ಗೆ ಈ*

*ಮೂಲಕ ಸೂಚನೆಯನ್ನು ನೀಡುತ್ತೇವೆ. 2013ರ ಅಧಿನಿಯಮವು ಸಂಪೂರ್ಣವಾಗಿ ಕ್ಷೇತ್ರವನ್ನು ಆವರಿಸಿಕೊಳ್ಳುವಷ್ಟರ ಮಟ್ಟಿಗೆ ಈ ನ್ಯಾಯಾಲಯವು ಹೆಚ್ಚಿನ ಹಣ ನೀಡುವುದನ್ನು ಅಗತ್ಯಪಡಿಸಿಲ್ಲವೆಂದು ನಾವು ಅಭಿಪ್ರಾಯಪಟ್ಟಿರುತ್ತೇವೆ. ಆದಾಗ್ಯೂ, ಎಲ್ಲಾ ರಾಜ್ಯಗಳು ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಮತ್ತು ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಕರ್ತವ್ಯವನ್ನು ಚಲಾಯಿಸಬೇಕೆಂಬುದನ್ನು ನಾವು ಮತ್ತೊಮ್ಮೆ ಪುನರುಚ್ಛರಿಸುತ್ತೇವೆ. ಕಡೆಯದಾಗಿ ಬಾಧಿತರಾದ ವ್ಯಕ್ತಿಗಳು ಪ್ರಥಮ ಕೋರಿಕೆಯಂತೆ ಸಂಬಂಧಪಟ್ಟ ಪ್ರಾಧಿಕಾರಗಳ ಮತ್ತು ಅಧಿಕಾರ ವ್ಯಾಪ್ತಿಯಿರುವ ಉಚ್ಚ ನ್ಯಾಯಾಲಯಗಳ ಮೊರೆ ಹೋಗಲು ಅನುಮತಿಸಲಾಗುವುದು."*

5. ಎರಡನೇ ಎದುರುದಾರರಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಅರ್ಜಿದಾರರಿಗೆ ಆಗಿರುವ ತೊಂದರೆಯನ್ನು ಪರಿಗಣಿಸಲು ಜಂಟಿ ಆಯುಕ್ತರಿಗೆ ಈ ವಿಷಯವನ್ನು ಕಳುಹಿಸಿದ್ದರೆಂದು 2ನೇ ಸಂಖ್ಯೆಯ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಕೆ.ಎನ್. ಪುಟ್ಟೇಗೌಡರವರು ನಿವೇದಿಸಿದ್ದಾರೆ. ಈ ನಿವೇದನೆಗೆ ಬಾಧಕವಾಗದ ಹಾಗೆ, ಸದರಿ ಚೆಂಚಯ್ಯನು ಮೃತನಾಗಿರುವನೆಂದು ತೋರಿಸಿದ್ದಲ್ಲಿ ಎರಡನೇ ಎದುರುದಾರನು ಮೃತ ಚೆಂಚಯ್ಯನನ್ನು ಸೇವೆಗೆ ನಿಯೋಜಿಸಿರಲಿಲ್ಲವೆಂದೂ ಕೆ.ಪಿ. ಅಗ್ರಹಾರ ಪೊಲೀಸು ಠಾಣೆಗೆ ಎದುರುರಾಗಿರುವ ಚರಂಡಿಯನ್ನು ಸ್ವಚ್ಛಗೊಳಿಸುವ ಯಾವುದೇ ಕಾರ್ಯವನ್ನು ಇದು ವಹಿಸಿರಲಿಲ್ಲವೆಂದೂ ಅವರು ನಿವೇದಿಸಿದ್ದಾರೆ. ಅರ್ಜಿದಾರನು ತನ್ನ ಉದಾಸೀನತೆಯ ಕಾರಣದಿಂದ ಮೃತನಾಗಿದ್ದರೆ ಎರಡನೇ ಎದುರುದಾರನಾದ ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯು ನಷ್ಟ ಪರಿಹಾರವನ್ನು ಸಂದಾಯ ಮಾಡುವ ಹೊಣೆಗಾರಿಕೆಯನ್ನು ಹೊಂದಿರುತ್ತಿರಲಿಲ್ಲ. ಎರಡನೇ ಎದುರುದಾರನು ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಯಾಗಿಲ್ಲದಿದ್ದರೂ ಕೂಡ ಮೇಯರ್‌ರವರ ನಿಧಿಯಿಂದ 2,00,000/– ರೂ.ಗಳನ್ನು ಸಂದಾಯ ಮಾಡಲಾಗಿದೆ. ಮಾನವೀಯತೆಯ ಆಧಾರದ ಮೇಲೆ ಇದನ್ನು ಮಾಡಲಾಗಿದೆಯೆಂದು ಅವರು

ನಿವೇದಿಸಿದ್ದಾರೆ. ಮರಣೋತ್ತರ ಶವಪರೀಕ್ಷಾ ವರದಿ ಪ್ರಕಾರ ಮೃತರ ವಯಸ್ಸು 75 ವರ್ಷಗಳೆಂದು ತೋರಿಸಲಾಗಿದೆ ಮತ್ತು ವೃದ್ಧರಾದ ಅವರು ಚರಂಡಿಯನ್ನು ಪ್ರವೇಶಿಸುವ ಧೈರ್ಯ ಮಾಡಿರಲಾರನೆಂದು ಸಹ ಅವರು ನಿವೇದಿಸಿದ್ದಾರೆ.

6. ಎದುರುದಾರ ಸಂ.1ರ ಪರವಾಗಿ ಹಾಜರಾಗಿರುವ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಶ್ರೀ ಆರ್.ಬಿ. ಸತ್ಯನಾರಾಯಣ ಸಿಂಗ್‌ರವರು, ಪಕ್ಷಕಾರರ ಅಗತ್ಯ ಸಹಭಾಗಿತ್ವ ಲೋಪದ ಚಿಕ್ಕ ಆಧಾರದ ಮೇಲೆ ಅರ್ಜಿಯನ್ನು ವಜಾಗೊಳಿಸಬಹುದೆಂದು ನಿವೇದಿಸಿದ್ದಾರೆ. ಪ್ರಶ್ನಿತ ಕೆಲಸಕ್ಕೆ ಮೃತ ಕೆಲಸಗಾರನನ್ನು ಆಪಾದಿತವಾಗಿ ನಿಯೋಜಿಸಿರುವ ಅಥವಾ ಆಯ್ಕೆ ಮಾಡಿರುವ ಗುತ್ತಿಗೆದಾರನನ್ನು ಪಕ್ಷಕಾರನ್ನಾಗಿ ಮಾಡಿಲ್ಲವೆಂದು ನಿವೇದಿಸಿದ್ದಾರೆ. ಮೃತ ಚೆಂಚಯ್ಯನ ಹೆಸರು ಜಾಡಮಾಲಿಗಳ ಪಟ್ಟಿಯಲ್ಲಿ ತೋರಿಸಿರಲಿಲ್ಲವೆಂದು ಅವರು ನಿವೇದಿಸಿದ್ದಾರೆ.

7. ಸಹಭಾಗಿತ್ವದ ಲೋಪದ ಕ್ರಮದಂತೆ, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಕುಮಾರಿ ಮೈತ್ರೇಯಿ ಕೃಷ್ಣನ್‌ರವರು, ಪ್ರಶ್ನಿತ ಅಪಘಾತವು, ಸದರಿ ಅಧಿನಿಯಮ ಪ್ರಾರಂಭವಾದ ನಂತರ ಸಂಭವಿಸಿದೆಯೆಂದು ನಿವೇದಿಸಿದ್ದಾರೆ. 18.09.2013ರಂದು ಸದರಿ ಅಧಿನಿಯಮವು ಜಾರಿಗೆ ಬಂದಿದ್ದಾಗ, 18.01.2014ರಂದು ತೆರೆದ ಚರಂಡಿಯಲ್ಲಿ (ರೊಚ್ಚಿನಿಂದ ತುಂಬಿಕೊಂಡಿದ್ದ) ಅವನು ಮುಳುಗಿಹೋದ ಕಾರಣದಿಂದಾಗಿ ಚೆಂಚಯ್ಯನು ಮರಣಹೊಂದಿದ್ದನು. ಅವರು ***ದೆಹಲಿ ಜಲ ಮಂಡಳಿ (ಮೇಲಿನ)*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಗುತ್ತಿಗೆದಾರನು ಪಕ್ಷಕಾರನಲ್ಲದಿರುವುದರಿಂದ ವಾಸ್ತವವಾಗಿ ರಿಟ್ ಅರ್ಜಿಯನ್ನು ವಜಾಗೊಳಿಸಬೇಕಾಗಿತ್ತೆಂದು ಪ್ರಾಧಿಕಾರಗಳು ಎತ್ತಿದ ಸದೃಶ ಆಕ್ಷೇಪವನ್ನು ತಳ್ಳಿಹಾಕಿತ್ತೆಂದು ನಿವೇದಿಸಿದ್ದಾರೆ.

8. ಮಾನ್ಯ ವಕೀಲರ ನಿವೇದನೆಗಳನ್ನು ಆಲೋಚನಾಪೂರ್ಣವಾಗಿ ನಾನು ಗಮನಿಸಿದ್ದೇನೆ. ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಗಳ ಉಲ್ಲೇಖಗಳು, ಇದರ ವ್ಯವಹಾರಗಳ ಹಿಂದಿನ ಸ್ಥಿತಿಯನ್ನು ಮತ್ತು ಅಮಾನವೀಯ ಮತ್ತು ಅಸಹ್ಯ ಪದ್ಧತಿಯನ್ನು ಇದರ ನಿವಾರಣೆಗಾಗಿ ಪರಿನಿಯಮ ರೂಪಿಸಿರುವುದರ

ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆ. ಈ ದುರದೃಷ್ಟಕರ ಸನ್ನಿವೇಶವನ್ನು ಅಪಾರ ಕಾಳಜಿಯೊಂದಿಗೆ ಈ ಮುಂದಿನ ಶಬ್ದಗಳಲ್ಲಿ ಸೂಚಿಸಿದೆ:

> *"ಸದಾಕಾಲ ನಿರಂತರವಾಗಿರುವಂಥ ಸ್ವಚ್ಛವಾಗಿಲ್ಲದ ಶೌಚಗೃಹಗಳಿಂದ ಹೊರಬರುವ ಹೊಲಸನ್ನು ಕೈಯಿಂದ ಸ್ವಚ್ಛಗೊಳಿಸುವ ಅಮಾನವೀಯ ಪದ್ಧತಿ ಮತ್ತು ಘನ ಘೋರವಾದ ಜಾತಿಪದ್ಧತಿಯು ದೇಶದ ನಾನಾ ಭಾಗಗಳಲ್ಲಿ ಇನ್ನೂ ಜೀವಂತವಾಗಿದ್ದು, ನೈರ್ಮಲ್ಯ ರಹಿತ ಶೌಚಗೃಹಗಳು ಮತ್ತು ದೈಹಿಕವಾಗಿ ಸ್ವಚ್ಛಗೊಳಿಸುವ ಈ ಅವಳಿ ದುಷ್ಟ ಪದ್ಧತಿಗಳನ್ನು ನಿವಾರಿಸುವುದನ್ನು ಈಗಿರುವ ಕಾನೂನು ಸರಿಯಾಗಿ ರುಜುವಾತುಪಡಿಸಿರುವುದಿಲ್ಲ;*
>
> *ಹಿಂದಿನಿಂದ ಬಂದಿರುವ ಅನ್ಯಾಯವನ್ನು ಸರಿಪಡಿಸುವುದು ಮತ್ತು ದೈಹಿಕವಾಗಿ ಸ್ವಚ್ಛಗೊಳಿಸುವ ಜಾಡಮಾಲಿಗಳು ಅನುಭವಿಸುತ್ತಿರುವ ಅಪಮಾನವನ್ನು ಸರಿಪಡಿಸುವುದು ಅಗತ್ಯವಾಗಿದೆ;*

9. ಮೃತರಿಗೆ 75 ವರ್ಷ ವಯಸ್ಸಾಗಿತ್ತು ಮತ್ತು ಅವರ ಕರ್ತವ್ಯಗಳನ್ನು ನಿರ್ವಹಿಸುವ ಕ್ರಮದಲ್ಲಿ ಉದಾಸೀನತೆಯನ್ನು ಅವನು ತೋರಿರುವನೆನ್ನುವ ಆಧಾರದ ಮೇಲೆ, ಈ ಅರ್ಜಿಯನ್ನು ಆಚೆಗೆ ಎಸೆಯಲು ಸಾಧ್ಯವಾಗುವುದಿಲ್ಲ. ***ದೆಹಲಿ ಜಲ ಮಂಡಳಿ (ಮೇಲಿನ)*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ, ಸ್ವಚ್ಛಗೊಳಿಸುವ ಉದ್ದೇಶಕ್ಕಾಗಿ ಒಳಚರಂಡಿ ಪದ್ಧತಿಯ ಮ್ಯಾನ್‌ಹೋಲ್ ಅನ್ನು ಪ್ರವೇಶಿಸಲು ಯಾರೊಬ್ಬರೂ ಇಷ್ಟಪಡುವುದಿಲ್ಲ; ಕೆಲವು ವ್ಯಕ್ತಿಗಳನ್ನು ಇಂಥ ಅಪಾಯದ ಕೆಲಸಗಳನ್ನು ಕೈಗೊಳ್ಳಲು ನೂಕಲ್ಪಟ್ಟಾಗ ದಿನದ ಕೊನೆಯಲ್ಲಿ, ತಮ್ಮ ಕುಟುಂಬಕ್ಕೆ ಸ್ವಲ್ಪ ಹಣವನ್ನು ಮತ್ತು ಆಹಾರವನ್ನು ಹುಟ್ಟಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ಭರವಸೆ ಮಾತ್ರ ಇರುತ್ತದೆ; ಕೈಯಿಂದ ಸ್ವಚ್ಛಗೊಳಿಸುವವರಿಗೆ ಇತರರ ಅನುಕೂಲಕ್ಕಾಗಿ ತಮ್ಮ ಜೀವಗಳನ್ನು ಕಳೆದುಕೊಳ್ಳುವ ಅಪಾಯವಿರುತ್ತದೆ. ಯಾರೋ ಒಬ್ಬರು ಮ್ಯಾನ್‌ಹೋಲ್‌ನಲ್ಲಿ ಮೃತರಾದಾಗ

ನ್ಯಾಯಾಲಯಗಳು ಜವಾಬ್ದಾರಿಯನ್ನು ಹೊಂದಿರುತ್ತವಷ್ಟೇ ಅಲ್ಲ ಜೀವಕ್ಕೆ ಅಪಾಯ ಮತ್ತು ಗಂಡಾಂತರವನ್ನುಂಟು ಮಾಡುವಂಥ ಕೆಲಸಗಳಿಗೆ ನೂಕಲ್ಪಡುವ ವ್ಯಕ್ತಿಗಳ ಜೀವಗಳಿಗೆ ಸಂಬಂಧಪಟ್ಟಂಥ ವಿವಾದಾಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುವ ಸಾಂವಿಧಾನಿಕ ಹೊಣೆಗಾರಿಕೆಯನ್ನು ಹೊಂದಿರುತ್ತವೆ.

10. ಸರ್ವೋಚ್ಚ ನ್ಯಾಯಾಲಯವು, ತೆರಿಗೆಗಳನ್ನು ಸಂದಾಯ ಮಾಡುವುದರಿಂದ ಮತ್ತು ಕರ್ತವ್ಯಗಳಿಂದ ತಪ್ಪಿಕೊಳ್ಳುವ ಅಥವಾ ಇತರೆ ರೀತಿಯಲ್ಲಿ ಸರ್ಕಾರಿ ಬೊಕ್ಕಸಕ್ಕೆ ನಷ್ಟವುಂಟು ಮಾಡುವ ಅಥವಾ ಕೊಲೆ, ಅತ್ಯಾಚಾರ, ವರದಕ್ಷಿಣೆ ಸಾವು, ಅಪಹರಣ, ಹೊತ್ತೊಯ್ಯುವಿಕೆಯಂಥ ಹೀನ ಕೃತ್ಯದ ಅಪರಾಧಗಳನ್ನು ಮಾಡುವ ಮತ್ತು ಭಯೋತ್ಪಾದಕ ಕೃತ್ಯಗಳನ್ನು ಮಾಡುವಂಥ ಅಪರಾಧಿಗಳ ಅಥವಾ ಕರಾರುಜನ್ಯ ವಿಷಯಗಳಲ್ಲಿ ರಾಜ್ಯ ಮತ್ತು ಅಥವಾ ಅದರ ಏಜೆನ್ಸಿಗಳು/ ಮಾಧ್ಯಮಗಳು ತಮ್ಮ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿವೆಯೆನ್ನುವ ತೊಂದರೆಯಿಂದ ಮುಂದೆ ಬಂದಿರುವಂಥ ವ್ಯಕ್ತಿಗಳ ಕೆಲಸದಲ್ಲಿ ನಿರತರಾದ ದಕ್ಷ ವಕೀಲರ ಪ್ರತಿಪಾದಿತ ವರ್ಗದವರ ವಾದವನ್ನು ಆಲಿಸಲು ನ್ಯಾಯಾಲಯಗಳು ಗಂಟೆಗಳು, ದಿನಗಳು ಮತ್ತು ತಿಂಗಳುಗಳನ್ನು ಮೀಸಲಾಗಿಡಬಹುದಾದರೆ, ಕೆಲವು ಸಮಯವನ್ನು ತಣ್ಣಗೆ ಕೊರಗುವ ಬಹು ದೊಡ್ಡ ಸಂಖ್ಯೆಯಲ್ಲಿ ತೊಂದರೆಗೊಳಗಾದ ಒಂದು ವರ್ಗಕ್ಕೆ ಯಾವಾಗಲೂ ಮೀಸಲಾಗಿಡಬಹುದೆನ್ನುವ ಸಕಾಲಿಕ ಕಾಳಜಿಯನ್ನು ಅಭಿವ್ಯಕ್ತಪಡಿಸಿದೆ.

11. ***ಸಫಾಯಿ ಕರ್ಮಚಾರಿ ಆಂದೋಲನ (ಮೇಲಿನ)*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಎಲ್ಲಾ ರಾಜ್ಯಸರ್ಕಾರಗಳಿಗೆ ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ, 1993ರಿಂದ ಒಳಚರಂಡಿ ಕಾರ್ಯದಲ್ಲಿದ್ದಾಗ ಮೃತರಾದ ಎಲ್ಲಾ ವ್ಯಕ್ತಿಗಳ ಕುಟುಂಬಗಳನ್ನು ಗುರುತಿಸಲು ನಿರ್ದೇಶಿಸಿದೆ ಮತ್ತು ಅವನನ್ನು ಅವಲಂಬಿಸಿರುವ ಕುಟುಂಬದ ಸದಸ್ಯರಿಗೆ ಆ ರೀತಿ ಮರಣ ಹೊಂದಿದ ಪ್ರತಿಯೊಬ್ಬರಿಗೆ 10.00 ಲಕ್ಷ ರೂ.ಗಳ ನಷ್ಟಪರಿಹಾರವನ್ನು ನೀಡಲು ಸೂಚಿಸಿದೆ. ಭಾರತ ಸಂವಿಧಾನದ 144ನೇ ಅನುಚ್ಛೇದವು, ಎಲ್ಲಾ ಪ್ರಾಧಿಕಾರಗಳು, ಭಾರತದ ಒಕ್ಕೂಟ ರಾಜ್ಯ

ಕ್ಷೇತ್ರದಲ್ಲಿರುವ ಸಿವಿಲ್ ಮತ್ತು ನ್ಯಾಯಿಕ ಪ್ರಾಧಿಕಾರಗಳು ಸರ್ವೋಚ್ಚ ನ್ಯಾಯಾಲಯದ ಸಹಾಯವನ್ನು ಪಡೆದುಕೊಳ್ಳಲು ಕಾರ್ಯ ನಿರ್ವಹಿಸತಕ್ಕದ್ದೆಂದು ತಿಳಿಸಿದೆ.

12. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಎರಡನೇ ಎದುರುದಾರರಿಗೆ, 10.00 ಲಕ್ಷ ರೂ.ಗಳ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕೆಂದು ಈಗಾಗಲೇ ಸೂಚಿಸಿರುವುದನ್ನು ಗಮನಿಸಿರುವುದು ಸಹ ಸೂಕ್ತವಾಗಿದೆ. ಮೊದಲನೇ ಎದುರುದಾರನು ತನ್ನ ಸಮಾಜ ಕಲ್ಯಾಣ ಇಲಾಖೆ ಮೂಲಕ 10.00 ಲಕ್ಷ ರೂ.ಗಳ ನಷ್ಟ ಪರಿಹಾರವನ್ನು ಮತ್ತು ದಿನಾಂಕ 16.09.2014ರ ತನ್ನ ಪತ್ರದಿಂದ ಸಾಕ್ಷ್ಯವಾಗಿರುವಂತೆ ಮೃತ ಚೆಂಚಯ್ಯನ ಅವಲಂಬಿತರಿಗೆ ನೀಡಬೇಕಾದ ಇತರ ಪ್ರಯೋಜನಗಳನ್ನು ಈಗಾಗಲೇ ಶಿಫಾರಸು ಮಾಡಿದ್ದಾರೆ.

13. ಈ ನ್ಯಾಯಾಲಯವು, ದಿನಾಂಕ 2.9.2015ರ ತನ್ನ ಆದೇಶದ ಮೂಲಕ, ಎರಡನೇ ಎದುರುದಾರನಿಗೆ, ದಿನಾಂಕ 16.9.2014ರ ಮೊದಲನೇ ಎದುರುದಾರರ ಪತ್ರದಂತೆ ಮೂರು ವಾರದ ಸಮಯದೊಳಗೆ ನಿರ್ಧಾರ ಕೈಗೊಳ್ಳಬೇಕೆಂದು ಸೂಚನೆಯನ್ನು ನೀಡಿದೆ. ದಿನಾಂಕ 2.9.2015ರ ಮಧ್ಯಂತರ ಆದೇಶವನ್ನು ಹೊರಡಿಸಿದ ದಿನಾಂಕದಿಂದ ನಾಲ್ಕು ತಿಂಗಳುಗಳು ಮೀರಿ ಹೋಗಿದೆ. ಎರಡನೇ ಸಂಖ್ಯೆಯ ಎದುರುದಾರನು ತಾನೇ ಖಚಿತವಾಗಿ ತಿಳಿದುಕೊಳ್ಳುವ ಕಾರಣಗಳಿಗಾಗಿ ಈ ವಿಷಯದಲ್ಲಿ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಈ ಸ್ವರೂಪದ ವಿಷಯವನ್ನು ಅನಿರ್ದಿಷ್ಟ ಅವಧಿವರೆಗೆ ಕಾಯುಲಾಗುವುದಿಲ್ಲ. ಬೆಳವಣಿಗೆಯು ಅಂತರ್ನಿಹಿತವಾಗಿರುತ್ತದೆ, ನ್ಯಾಯವನ್ನು ಅಂತರ್ನಿಹಿತವಾಗಿ ತೆಗೆದುಕೊಳ್ಳಬೇಕು. ಮೃತ ಕೈಯಿಂದ ಸ್ವಚ್ಛಗೊಳಿಸುವ ಜಾಡಮಾಲಿಯ ಅವಲಂಬಿತರನ್ನು ಒಟ್ಟಾರೆಯಾಗಿ ಅವರ ಹಣೆಬರಹವೆಂದು ಬಿಡಲಾಗುವುದಿಲ್ಲ.

14. ಈ ಹಿಂದೆ ಹೇಳಲಾದ ಎಲ್ಲಾ ಕಾರಣಗಳಿಗಾಗಿ, ಈ ಅರ್ಜಿಯನ್ನು, ಮುಂದಿನ ನಿರ್ದೇಶನಗಳನ್ನು ನೀಡುವ ಮೂಲಕ ಪುರಸ್ಕರಿಸುತ್ತೇನೆ:–

i) ಎರಡನೇ ಸಂಖ್ಯೆಯ ಎದುರುದಾರನು, ಇಂದಿನ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಹೊರಡಿಸಿದ ದಿನಾಂಕದಿಂದ ಆರು ವಾರಗಳೊಳಗೆ ಮೃತ ಚೆಂಚಯ್ಯನ ಅವಲಂಬಿತರಿಗೆ 8,00,000/– ರೂ. (ಎಂಟು ಲಕ್ಷ ರೂ.ಗಳು ಮಾತ್ರ) ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

ii) ಎರಡನೇ ಸಂಖ್ಯೆಯ ಎದುರುದಾರನು, ಸದರಿ ಅಧಿನಿಯಮದ 13ನೇ ಪ್ರಕರಣವು ಖಾತರಿಪಡಿಸಿರುವ ಮತ್ತು ***ಸಫಾಯಿ ಕರ್ಮಚಾರಿ ಆಂದೋಲನ (ಮೇಲಿನ)*** ಪ್ರಕರಣದಲ್ಲಿ ತನ್ನ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಬೇಕೆಂದು ಸೂಚಿಸಿರುವ ಎಲ್ಲಾ ಪ್ರಯೋಜನಗಳನ್ನು ಇಂದಿನ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಹೊರಡಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗೆ ಸದರಿ ಚೆಂಚಯ್ಯನ ಅವಲಂಬಿತರಿಗೆ ನೀಡತಕ್ಕದ್ದು.

iii) ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.